



## ಆಸೆ

ಮೇಷ್ಟ್ರು: ಸಂತಾ ನಿನಗೆ ಏನಾಗ್ಬೇಕು ಅಂತ ಆಸೆ ಇದೆ?

ಸಂತಾ: ನಾನು ಅಪ್ಪನಂತೆ ಈ ದೇಶದ ಪ್ರಧಾನಿ ಆಗ್ಬೇಕು ಅಂತ ಆಸೆ.

ಮೇಷ್ಟ್ರು: ಅರೆ! ನಿಮ್ಮಪ್ಪ ದೇಶದ ಪ್ರಧಾನಿ ಆಗಿದ್ರಾ?

ಸಂತಾ: ಇಲ್ವಲ್ಲಾ. ಅಪ್ಪನಿಗೂ ಕೂಡ ಇದೇ ಆಸೆ ಇತ್ತು.

★★★

## ಕಾರಣ!

ಸಂತಾ: ಪಿನ್ ತಗೊಂಡು ಚರ್ಮಕ್ಕೆ ಚುಚ್ಚಿದರೆ ರಕ್ತ ಯಾಕೆ ಹೊರಗೆ ಬರುತ್ತೆ ಗೊತ್ತಾ?

ಬಂತಾ: ಗೊತ್ತಿಲ್ಲಪ್ಪಾ.

ಸಂತಾ: ಯಾರು ಚುಚ್ಚಿದ್ದು ಅಂತಾ ನೋಡೋಕೆ!

★★★

## ಎರಡು ವಾಕ್ಯಗಳು!

ಇಂಗ್ಲೆಂಡಿನ ಬುಟ್ ಬೆಂಗಳೂರಿಗೆ ಬಂದು ಒಂದು ತಿಂಗಳು ಉಳಿದುಕೊಂಡು ಮರಳಿ ಹೋಗುವುದರೊಳಗೆ ಎರಡು ಕನ್ನಡ ವಾಕ್ಯಗಳನ್ನು ಕಲಿತುಕೊಂಡರು.

1. ಅಬ್ಬಾ! ಕರೆಂಟು ಬಂತು!
2. ಥೂ, ಇದರಜ್ಜಿ ಮತ್ತೆ ಹೋಯ್ತು!

★★★

## ಸಿಗ್ನಲ್!

ಸಂತಾ ಮತ್ತು ಬಂತಾನ ವಾಹನಗಳು ಮುಖಾಮುಖಿಯಾಗಿ ಡಿಕ್ಕಿ ಹೊಡೆದವು.

ಸಂತಾ: ನಾನು ನಿನಗೆ ಸೈಡ್ ಕೊಡೋಕೆ ಹೆಡ್ ಲೈಟ್ ಹಾಕಿ ತೋರಿಸಲಿಲ್ವಾ?

ಬಂತಾ: ನಾನೂ ವೈಪರ್ ಹಾಕಿ ಆಗಲ್ಲಾ, ಆಗಲ್ಲಾ ಅಂತ ತೋರಿಸಲಿಲ್ವಾ?

★★★

## ಬಾಡಿ ಬಂತು!

ಸಂತಾನ ಗೆಳೆಯ ಅಪಘಾತದಲ್ಲಿ ಸತ್ತು ಹೋಗಿದ್ದ. ಸಂತಾಪ ಸೂಚಿಸಲು ಸಂತಾ ಆತನ ಮನೆಗೆ ಬಂದ. ಗೆಳೆಯನ ಹೆಂಡತಿಯನ್ನು ಕೇಳಿದ.

'ಬಾಡಿ ಬಂತಾ?'

ಅದೇ ಹೊತ್ತಿಗೆ ಅಂಬುಲೆನ್ಸ್ ಮನೆ ಮುಂದೆ ಬಂದು ನಿಂತಿತು.

'ಓಹ್, ಗಾಡ್. ಬಾಡಿ ಬಂತು. ಅವನಿಗೆ ನೂರು ವರ್ಷ ಆಯಸ್ಸು' ಸಂತಾ ನುಡಿದ.

★★★

## ಉಪದೇಶ!

ಶಾಂತಿ ಮಗಳಿಗೆ ಉಪದೇಶ ಮಾಡುತ್ತಿದ್ದಳು.

'ನೋಡು ಯಾರಾದ್ರೂ ನಿನ್ನನ್ನು ತಬ್ಬಿಕೊಂಡ್ರೆ DON'T ಎಂದೂ, ಯಾರಾದ್ರೂ ಮುತ್ತು ಕೊಟ್ರೆ STOP ಎಂದೂ ಹೇಳು.'

ಒಂದು ದಿನ ಮಹಾತ್ಮ ಗಾಂಧಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಅವಳನ್ನು ಹುಡುಗನೊಬ್ಬ ತಬ್ಬಿ ಮುತ್ತು ಕೊಟ್ಟ. ತಕ್ಷಣ ಅವಳು ಕೂಗಿದಳು: DON'T STOP.

(ಸಂ)ಪ್ರಕಾಶ. ಎಸ್. ಮನ್ನಂಗಿ

---



ಗೃಹಿಣಿ: ಯಾಕ್ರೀ ಗುಂಡಣ್ಣ, ನಿನ್ನೆ ನಮ್ಮ ಮನೆಯ ಕಾಲಿಂಗ್ ಬೆಲ್ ಸರಿ ಮಾಡಲು ಬರಲೇ ಇಲ್ಲ.

ಗುಂಡ: ಬಂದಿದ್ದೆ ಅಮ್ಮಾವ್ರೇ, ಎಷ್ಟಸಲ ಬೆಲ್ ಮಾಡಿದರೂ ನೀವು ಬಾಗಿಲು ತೆರೆಯಲೇಯಿಲ್ಲ.

★★★

ಭಿಕ್ಷುಕ: (ಗೃಹಿಣಿಗೆ) ಅಮ್ಮಾ ತಾಯಿ ಭಿಕ್ಷೆ ಹಾಕ್ತೀರೋ ಅಥವಾ ಹಿಂದಿನ ಊರಿನಲ್ಲಿ ಮಾಡಿದ ಹಾಗೆ ಮಾಡಲೋ?

ಗೃಹಿಣಿ: (ಹೆದರಿಕೆಯಿಂದ), ಹಿಂದಿನ ಊರಿನಲ್ಲಿ ಏನು ಮಾಡಿದೆಯಪ್ಪ?

ಭಿಕ್ಷುಕ: ಭಿಕ್ಷೆ ಹಾಕೋಲ್ಲ, ಮುಂದಿನ ಊರಿಗೆ ಹೋಗು ಅಂದ್ರು. ಅದಕ್ಕೆ ಇಲ್ಲಿಗೆ ಬಂದೆ.

(ಸಂ) ಎಂ. ಮೋಹನ್‌ರಾವ್, ಬೆಂಗಳೂರು

